ಈ ಕಾರ್ಯಕ್ರಮಗಳನ್ನು ಆಯಾ ಕಾರ್ಯಕ್ರಮಗಳ ಮಾರ್ಗದರ್ಶನ ಸೂತ್ರಗಳ ಅನ್ವಯ ಅನುಷ್ಠಾನಗೊಳಿಸಬೇಕಾಗುವುದು.

ರಾಜ್ಯದ ಎಲ್ಲೆಡೆ ಹರಡಿರುವಂತಹ ಇಂತಹ ಕಾರ್ಯಕ್ರಮಗಳ ಮೇಲೆ ಕೇಂದ್ರದ ಅನುದಾನವನ್ನು ವ್ಯಯಿಸಲಾಗುತ್ತದೆ. ಪ್ರಸ್ತುತ ಚಾಲ್ತಿಯಲ್ಲಿರುವ ಲೆಕ್ಕ ವ್ಯವಸ್ಥೆಯ ಪ್ರಕಾರ ಜಿಲ್ಲಾವಾರು / ತಾಲ್ಲೂಕುವಾರು ಆಯವ್ಯಯ ಹಂಚಿಕೆ ಮತ್ತು ಅದರ ವೆಚ್ಚವನ್ನು ಕೇಂದ್ರಿಕೃತವಾಗಿ ತೋರಿಸುವ ವ್ಯವಸ್ಥೆ ಇರುವುದಿಲ್ಲ.

168 (444) : ಶ್ರೀ ಚನ್ನಬಸವರಾಜ್ (ಅಪ್ಪಾಜಿ) ಶಂಕರರಾವ್ ನಾಡಗೌಡ – ಮಾನ್ಯ ಯೋಜನೆ, ಸಣ್ಣ ಉಳಿತಾಯ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಯಾವ ಯಾವ ರಾಜ್ಯಗಳ ಆನ್‌ಲೈನ್ ಲಾಟರಿ ಡ್ರಾಗಳು ಪ್ರತಿದಿನ ನಡೆಯುತ್ತಿವೆ (ರಾಜ್ಯಗಳವಾರು ವಿವರ ನೀಡುವುದು);

ಆ) ಇದರಿಂದ ರಾಜ್ಯಕ್ಕೆ ಬರುವಂತಹ ಆದಾಯವೆಷ್ಟು;

ಇ) ಆನ್‌ಲೈನ್ ಲಾಟರಿಯಿಂದ ರಾಜ್ಯದ ಬಡಜನರು ನಿರ್ಗತಿಕರಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಹಾಗಿದ್ದರೆ, ಆನ್‌ಲೈನ್ ಲಾಟರಿಯನ್ನು ರದ್ದುಗೊಳಿಸಲು ಸರ್ಕಾರ ಉದ್ದೇಶಿಸಿದೆಯೇ?

ಶ್ರೀ ರಾಮಚಂದ್ರಗೌಡ (ಯೋಜನೆ, ಸಣ್ಣ ಉಳಿತಾಯ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು) –

ಅ) ಲಾಟರಿ (ರೆಗ್ಯುಲೇಷನ್) ಆಕ್ಟ್ 1998ರನ್ವಯ ಹೊರ ರಾಜ್ಯಗಳ ಆನ್‌ಲೈನ್ ಲಾಟರಿಗಳ ಡ್ರಾಗಳು ಆಯಾ ರಾಜ್ಯಗಳಲ್ಲಿ ನಡೆಯುತ್ತಿದ್ದು ಕರ್ನಾಟಕ ರಾಜ್ಯದಲ್ಲಿ ಈ ಕೆಳಕಂಡ ರಾಜ್ಯಗಳ ಆನ್‌ಲೈನ್ ಲಾಟರಿ ಟಿಕೇಟುಗಳು ಮಾರಾಟವಾಗುತ್ತಿವೆ.

ರಾಜ್ಯದ ಹೆಸರು	ಡ್ರಾಗಳ ಸಂಖ್ಯೆ
ಸಿಕ್ಕಿಂ	ಪ್ರತಿದಿನ 32 ರಿಂದ 34 ಡ್ರಾಗಳು
ಅರುಣಾಚಲ ಪ್ರದೇಶ	ಪ್ರತಿದಿನ 9 ಡ್ರಾಗಳು

ಆ) ಆನ್‌ಲೈನ್ ಲಾಟರಿ ಮೇಲಿನ ತೆರಿಗೆಯಿಂದ 2006–07ನೇ ಸಾಲಿಗೆ (ಏಪ್ರಿಲ್ 06 ರಿಂದ ಡಿಸೆಂಬರ್ ಅಂತ್ಯದವರೆಗೆ) ರೂ.10.37 ಕೋಟಿ ಆದಾಯ ರಾಜ್ಯ ಸರ್ಕಾರಕ್ಕೆ ಬಂದಿರುತ್ತದೆ.

ಇ) ಬಂದಿದೆ.

ಈ) ಕರ್ನಾಟಕ ರಾಜ್ಯವು ದಿನಾಂಕ: 24.07.2004ರಿಂದ ಆನ್‌ಲೈನ್ ಲಾಟರಿಯನ್ನು ನಿಷೇಧಿಸಿದ್ದು, ಪ್ರಸ್ತುತ ಈ ರಾಜ್ಯದಲ್ಲಿ ಹೊರ ರಾಜ್ಯಗಳಾದ ಸಿಕ್ಕಿಂ ಮತ್ತು ಅರುಣಾಚಲ ಪ್ರದೇಶ ಸರ್ಕಾರಗಳ ಆನ್‌ಲೈನ್ ಲಾಟರಿಗಳು ನಡೆಯುತ್ತಿವೆ. ಕರ್ನಾಟಕ ಉಚ್ಚ ನ್ಯಾಯಾಲಯ ದಿನಾಂಕ: 02.06.2006ರ ತೀರ್ಪಿನಲ್ಲಿ ಕರ್ನಾಟಕ ರಾಜ್ಯ ಸರ್ಕಾರ ರಾಜ್ಯದಲ್ಲಿ ಆನ್‌ಲೈನ್ ಲಾಟರಿ ರದ್ದುಪಡಿಸಿದ್ದ ದಿನಾಂಕ: 24.07.2004ರ ಅಧಿಸೂಚನೆಯನ್ನು ಅನೂರ್ಜಿತಗೊಳಿಸಿದೆ. ಇದರ ವಿರುದ್ಧ ರಾಜ್ಯ ಸರ್ಕಾರ ಸರ್ವೋಚ್ಚ ನ್ಯಾಯಾಲಯದಲ್ಲಿ ವಿಶೇಷ ರಜೆ ಅರ್ಜಿ ಸಲ್ಲಿಸಿದೆ. ಪ್ರಸ್ತುತ ರಾಜ್ಯ ಸರ್ಕಾರದ ಪೇಪರ್ ಲಾಟರಿಗಳು ನಡೆಯುವಾಗ್ಗೆ ಕೇವಲ ಆನ್‌ಲೈನ್ ಲಾಟರಿಗಳನ್ನು ರದ್ದುಪಡಿಸಲು ಹೈಕೋರ್ಟ್ ತೀರ್ಪಿನಂತೆ ಅವಕಾಶವಿರುವುದಿಲ್ಲ.

170 (623) : ಶ್ರೀ ಪಾಟೀಲ್ ಎ.ಬಿ. (ಸಂಕೇಶ್ವರ್) – ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲ್ಲೂಕಿನ ಸಂಕೇಶ್ವರ ಅರಣ್ಯ ಪ್ರದೇಶದಲ್ಲಿನ ಕಾಡಾನೆಗಳ ಹಾವಳಿ ಜಾಸ್ತಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ಈ ಬಗ್ಗೆ ಇಲ್ಲಿಯವರೆಗೆ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು;

ಇ) 2006–2007ನೇ ಸಾಲಿನಲ್ಲಿ ಕಾಡಾನೆಗಳಿಂದ ತುಳಿತಕ್ಕೆ ಸಿಕ್ಕಿ ಸತ್ತವರ ಸಂಖ್ಯೆ ಎಷ್ಟು;

ಈ) ಮೃತಪಟ್ಟವರ ಕುಟುಂಬಗಳಿಗೆ ಸರ್ಕಾರ ಎಷ್ಟು ಪರಿಹಾರದ ಹಣ ನೀಡಲಾಗಿದೆ;

ಉ) ಅರಣ್ಯ ಇಲಾಖೆಯ ಅಧಿಕಾರಿಗಳ ನಿರ್ಲಕ್ಷ್ಯ ಮತ್ತು ಬೇಜವಾಬ್ದಾರಿಯಿಂದ ಇಂತಹ ಹಾನಿಗಳು ಆಗುತ್ತಿರುವುದರಿಂದ ಅವರ ವಿರುದ್ಧ ಕ್ರಮ ಜರುಗಿಸಲಾಗಿದೆಯೇ?

ಶ್ರೀ ಸಿ. ಚನ್ನಿಗಪ್ಪ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು)–

ಅ) ಹೌದು.